**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:26.09.2025 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಸ್ ಎನ್ ಎಸ್ ವಕೀಲರಿಂದ:**

ನನಗೆ ವಾದಿ ಮತ್ತು ಪ್ರತಿವಾದಿಗಳು ಪರಿಚಯ ಇರುತ್ತಾರೆ. ವಾದಿಯು ಯಾವ ಉದ್ದೇಶದಿಂದ ಈ ದಾವೆ ಹೂಡಿರುತ್ತಾರೆ ಎಂದು ನನಗೆ ಗೊತ್ತು. ನಿ ಪಿ 1 ಪ್ರೋನೋಟ್ ಬರೆದ ದಿನಾಂಕ ನನಗೆ ನೆನಪಿಲ್ಲ. ನಿ ಪಿ 1 ಅನ್ನು ಸುಮಾರು ಮಧ್ಯಾಹ್ನ 1.00 ಗಂಟೆಯ ಒಳಗೆ ಬರೆದು ಸಹಿ ಮಾಡಲಾಗಿತ್ತು. ನಿ ಪಿ 1 ಅನ್ನು ಸುಬ್ರಹ್ಮಣ್ಯ ಅವರ ಕಚೇರಿಯಲ್ಲಿ ಬರೆಯಲಾಗಿತ್ತು. ಆ ಸಂದರ್ಭದಲ್ಲಿ ಬಸವೇಗೌಡ, ಸಣ್ಣಮ್ಮ, ಬಸವರಾಜು, ಬಸವಣ್ಣ, ಚಿಕ್ಕಣ್ಣ ಮತ್ತು ನಾನು ಇದ್ದೆವು. ಚಿಕ್ಕಣ್ಣ ಅವರು ಪತ್ರ ಬರೆದಿದ್ದು ಆದರೆ ಸುಬ್ರಹ್ಮಣ್ಯ ಅವರ ಕಚೇರಿಯಲ್ಲಿ ಅವರು ಬರೆದಿರುತ್ತಾರೆ. ಸುಬ್ರಹ್ಮಣ್ಯ ಕೂಡಾ ಒಬ್ಬ ಪತ್ರಬರಹಗಾರರೇ ಇರುತ್ತಾರೆ. ಪ್ರತಿವಾದಿಗಳು ಎರಡು ಪ್ರೋನೋಟ್ ಅನ್ನು ಬರೆದುಕೊಟ್ಟಿರುತ್ತಾರೆ. ಒಂದನ್ನು 1 ಲಕ್ಷಕ್ಕೆ ಮತ್ತೊಂದನ್ನು 2 ಲಕ್ಷಕ್ಕೆ ಬರೆದುಕೊಟ್ಟಿರುತ್ತಾರೆ. ನಾನು ಹೇಳಿದಂತೆ ನಿ ಪಿ 1 ಅನ್ನು ಬರೆಯಲಾಗಿರುವುದಿಲ್ಲ ಆ ದಿನ ನಾನು ಅಲ್ಲಿ ಇರಲೇ ಇಲ್ಲ ಎಂದರೆ ಸರಿಯಲ್ಲ.

ವಾದಿಯು ಹಣ ಕೊಡುವ ಸಂದರ್ಭದಲ್ಲಿ ಪ್ರತಿವಾದಿಗಳಿಂದ ಎರಡು ಖಾಲಿ ಛಾಪಾ ಕಾಗದಗಳ ಮೇಲೆ ಅವರ ಸಹಿಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಖಾಲಿ ಛಾಪಾ ಕಾಗದಗಳನ್ನು ದುರುಪಯೋಗ ಪಡಿಸಿಕೊಂಡು ವಾದಿ ಎರಡು ಪ್ರೋನೋಟ್ ಗಳನ್ನು ಸೃಷ್ಟಿಸಿದ್ದು, 1 ಲಕ್ಷದ ಪ್ರೋನೋಟ್ ಗೆ ಈ ದಾವೆ ಹೂಡಿದ್ದು ಮತ್ತು ರೂ.2 ಲಕ್ಷದ ಪ್ರೋನೋಟ್ ಗೆ ಒ ಎಸ್ 29/2024 ಎಂದು ಇದೇ ನ್ಯಾಯಾಲಯದಲ್ಲಿ ಮತ್ತೊಂದು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಸೃಷ್ಟಿಸಿದ ದಾಖಲೆಗಳಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಹಿಯನ್ನು ನನ್ನಿಂದ ಈ ದಾವೆ ಹೂಡುವ ಸಂದರ್ಭದಲ್ಲಿ ವಾದಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲೇ ಮೊದಲ ಬಾರಿ ಪ್ರತಿವಾದಿಯನ್ನು ನೋಡುತ್ತಿದ್ದೇನೆ ನಾನು ಈ ಮೊದಲು ಅವರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮಹದೇವಮ್ಮನವರು ಬಸವರಾಜು ಅವರ ತಾಯಿ ಇರುತ್ತಾರೆ. ನನಗೂ ನಿ ಪಿ 1 ಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ವಾದಿ ಸೃಷ್ಟಿಸಿರುವ ನಿ ಪಿ 1 ಕ್ಕೆ ಪೂರಕವಾಗುವಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ**